**ಡಾ॥ ಹೆಚ್.ಸಿ. ಮಹದೇವಪ್ಪ:** ಮಾನ್ಯ ಅಧ್ಯಕ್ಷರೆ, ಅದನ್ನು 2016ಸಾಲಿಗೆ complete ಮಾಡಬೇಕು. 3 ಭಾಗ ಮಾಡಿ, ಸುಮಾರು 132 ಕಿ.ಮೀ ಉದ್ದದ ರಸ್ತೆಯಾಗಿದೆ. ಸವದತ್ತಿ, ರಾಮದುರ್ಗ, ಬಾದಾಮಿ, ಕಮತಗಿ ಅಷ್ಟು ಉದ್ದದ ರಸ್ತೆಯನ್ನು ಈಗ maintain ಮಾಡುವುದಕ್ಕೆ ಡಿಸೆಂಬರ್ 15 ಕ್ಕೆ notification ಮಾಡಿ, 22ಕ್ಕೆ ಟೆಂಡರ್‌ನ ಕೊನೆಯ ದಿನಾಂಕ ಕೊಟ್ಟಿದ್ದೇವೆ. ಅದು ಬಂದ ತಕ್ಷಣ ಅಲ್ಲಿ ಒಳ್ಳೆಯ ರಸ್ತೆ ಮಾಡುತ್ತೇವೆ. ಸವದತ್ತಿ ರಾಮದುರ್ಗ, ಬಾದಾಮಿ ಕಮತಗಿ ಇಲ್ಲಿ tourism connectivity ಕೂಡ ಆಗುತ್ತದೆ.

**ಅಧ್ಯಕ್ಷರು:** ರಾಘವೇಂದ್ರ, ಇಲ್ಲ. .. . ಶ್ರೀ ಗುರು ಪಾಟೀಲ್ ಶಿರವಾಳ

**11) ವಿಷಯ: ಶಹಪುರ ಕ್ಷೇತ್ರದ ಸುರಪುರ ತಾಲ್ಲೂಕಿನ ಏಪೂರ ಗ್ರಾಮದ ಸರ್ವೆ ನಂಬರ್ 115ರಲ್ಲಿ 193 ಎಕರೆ ಜಮೀನಿನಲ್ಲಿ ಸುಮಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಪಂಗಡಕ್ಕೆ ಸೇರಿದವರನ್ನು ಅಕ್ರಮವಾಗಿ ಜಮೀನಿನಿಂದ ಹೊರ ಹಾಕುತ್ತಿರುವ ಬಗ್ಗೆ.**

****

**ಶ್ರೀ ಗುರು ಪಾಟೀಲ್ ಶಿರವಾಳ (ಶಹಾಪುರ):** ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದ ಸುರಪುರ ತಾಲ್ಲೂಕಿನ ಏಪೂರ ಗ್ರಾಮ ಸರ್ವೆ ನಂ. 115 ರಲ್ಲಿ 193 ಎಕರೆ ಜಮೀನಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಲ್ಪಸಂಖ್ಯಾತರು ಸಾಗುವಳಿ ಮಾಡುವುದನ್ನು ಒಕ್ಕಲೆಬ್ಬಿಸಿರುತ್ತಾರೆ. ಅದನ್ನು ನಾನು ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯುತ್ತೇನೆ.

**ಅಧ್ಯಕ್ಷರು:** ಯಾವಾಗ ಮಾಡಿದ್ದಾರೆ?

**ಶ್ರೀ ಗುರು ಪಾಟೀಲ್ ಶಿರವಾಳ:** ಮಾನ್ಯ ಅಧ್ಯಕ್ಷರೆ, 3–4 ತಿಂಗಳಿನಿಂದ ಅಲ್ಲಿ ಒಕ್ಕಲೆಬ್ಬಿಸಿದ್ದಾರೆ.

**ಅಧ್ಯಕ್ಷರು:** ಅವರು ಅರ್ಜಿ ಕೊಟ್ಟಿದ್ದೀರಾ?

**ಶ್ರೀ ಗುರು ಪಾಟೀಲ್ ಶಿರವಾಳ:** ಮಾನ್ಯ ಅಧ್ಯಕ್ಷರೆ, ಹಿಂದೆ ಪಟ್ಟಾ ಆಗಿದೆ. ಎಲ್ಲಾ ಆಗಿದೆ. ಭೂಕಂದಾಯವನ್ನು ತುಂಬಿದ್ದಾರೆ.

**ಅಧ್ಯಕ್ಷರು:** ಆಯಿತು. ಮಂತ್ರಿಗಳು ಉತ್ತರ ಹೇಳುತ್ತಾರೆ.

**ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):** ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ಉತ್ತರದ ಪ್ರಕಾರ ಸುರಪುರ ತಾಲ್ಲೂಕಿನ ಏಪೂರ ಗ್ರಾಮದ ಸರ್ವೆ ನಂ.115ರಲ್ಲಿ 193 ಎಕರೆ 1978ರಂದು ಅರಣ್ಯ ಇಲಾಖೆಗೆ ಹಸ್ತಾಂತರವಾಗಿದೆ. ಅದರಲ್ಲಿ ಕೆ.ಎಫ್.ಡಿ.ಎಫ್. ಲೆಕ್ಕ ಶೀರ್ಷಿಕೆಯಡಿಯಲ್ಲಿ ನೆಡುತೋಪುಗಳನ್ನು ನೆಟ್ಟಿದ್ದಾರೆ. ಆದ್ದರಿಂದಾಗಿ, ಒಕ್ಕಲೆಬ್ಬಿಸುವಂಥ ಪ್ರಶ್ನೆ ಇಲ್ಲ. ಅಲ್ಲಿ ಸಾಗುವಳಿ ಮಾಡುತ್ತಿರುವವರನ್ನು ಯಾರೂ ಹೊರಗೆ ಹಾಕುವಂಥ ಪ್ರಶ್ನೆ ಉದ್ಭವಿಸುವುದಿಲ್ಲ.

**ಶ್ರೀ ಗುರು ಪಾಟೀಲ್ ಶಿರವಾಳ:** ಸನ್ಮಾನ್ಯ ಅಧ್ಯಕ್ಷರೆ, ಇವರು ಬಂದು ಅಲ್ಲಿ ನೋಡಲಿ. ಅಲ್ಲಿ ಯಾವ ನೆಡುತೋಪೂ ಸಹ ಇಲ್ಲ.

**ಅಧ್ಯಕ್ಷರು:** ನಾನು ಹೇಳುವುದನ್ನು ಸ್ವಲ್ಪ ಕೇಳಿ. ಅವರನ್ನು ಕೇಳಿದರೆ ನಿಮಗೆ ಪಂಗನಾಮ. ನೀವು ದಯವಿಟ್ಟು ಅರಣ್ಯ ಹಕ್ಕು ಕಾನೂನಿನ ಪ್ರಕಾರ ಮೊದಲು ಅರ್ಜಿ ಹಾಕಿಕೊಳ್ಳಿ.

**ಶ್ರೀ ಗುರು ಪಾಟೀಲ್ ಶಿರವಾಳ:** ಅರ್ಜಿಗಳಿದೆ, ಅಲ್ಲಿ ಭೂ ಕಂದಾಯ

**ಅಧ್ಯಕ್ಷರು:** ಎಲ್ಲಿದೆ ಅರ್ಜಿ? ಅರಣ್ಯ ಹಕ್ಕು ಸಮಿತಿ ಪಾರಂಪರಿಕ ಅರಣ್ಯ ಸಮಿತಿಯ ಪ್ರಕಾರ ಅರ್ಜಿ ಹಾಕಿದ್ದೀರಾ?

**ಶ್ರೀ ಗುರು ಪಾಟೀಲ್ ಶಿರವಾಳ:** ಅರ್ಜಿ ಹಾಕಿಲ್ಲ.

**ಅಧ್ಯಕ್ಷರು:** ಮೊದಲು ಅರ್ಜಿ ಹಾಕಿ.

**ಶ್ರೀ ಗುರು ಪಾಟೀಲ್ ಶಿರವಾಳ:** ಸಮಿತಿಯೇ ಆಗಿಲ್ಲ.

**ಅಧ್ಯಕ್ಷರು:** ಸಮಿತಿಯನ್ನು ಮಾಡಿಸಿ. ಕಾನೂನು ಸಚಿವರೇ, ಇನ್ನೂ ಅರಣ್ಯ ಹಕ್ಕು ಸಮಿತಿ ಆಗಿಲ್ಲವಂತೆ, ತಿಳಿದುಕೊಳ್ಳಿ.

**ಶ್ರೀ ಬಿ. ರಮಾನಾಥ ರೈ:** ಅದನ್ನು ಸಮಾಜ ಕಲ್ಯಾಣ ಇಲಾಖೆ ಮಾಡುತ್ತದೆ.

**ಶ್ರೀ ಗುರು ಪಾಟೀಲ್ ಶಿರವಾಳ:** ಸರ್ಕಾರದಿಂದ ಸಮಿತಿನೇ ರಚನೆಯಾಗಿಲ್ಲ.

**ಅಧ್ಯಕ್ಷರು:** ಅವರೇನು ಹೇಳುವುದು, ನಮ್ಮ Parliamentary Affairs Minister ಅದಕ್ಕೋಸ್ಕರ ಇರುವುದು. ಇದಕ್ಕೆ ಏನೆಂದು ಹೇಳುವುದು?

**ಶ್ರೀ ಗುರು ಪಾಟೀಲ್ ಶಿರವಾಳ:** ಸಭಾಧ್ಯಕ್ಷರೆ, ಈಗ ಒಂದು directions ಕೊಡಲಿ, ಅಲ್ಲಿ ಏನು ಒಕ್ಕಲೆಬ್ಬಿಸುತ್ತಿದ್ದಾರೆ,

**ಶ್ರೀ ಬಿ. ರಮಾನಾಥ ರೈ:** ನೆಡುತೋಪು ನೆಡಲಾಗಿದೆ.

**ಅಧ್ಯಕ್ಷರು:** ಅದನ್ನು ಆಮೇಲೆ ನೋಡೋಣ ಬಿಡಿ.

**ಶ್ರೀ ಟಿ.ಬಿ. ಜಯಚಂದ್ರ:** ಈ ಜಾಗದಲ್ಲಿ ಕೆ.ಎಫ್.ಡಿ.ಎಫ್.ನವರು ನೆಡುತೋಪನ್ನು ನೆಟ್ಟಿದ್ದಾರೆ.

**ಅಧ್ಯಕ್ಷರು:** ಅವರು ಹೇಳುತ್ತಾರೆಂದು ನೀವು ಅದನ್ನೇ ಓದುತ್ತೀರಿ. ನನಗೆ ಎಲ್ಲಾ ಗೊತ್ತಿದೆ. ಆಮೇಲೆ.

**ಶ್ರೀ ಗುರು ಪಾಟೀಲ್ ಶಿರವಾಳ:** ಸಭಾಧ್ಯಕ್ಷರೆ, ಅವರು ಬಂದು ನೋಡಲಿ.

**ಅಧ್ಯಕ್ಷರು:** ಆಮೇಲೆ ಅರ್ಜಿ ಹಾಕಿಕೊಂಡಾಗ, ವಿಚಾರಣೆಗೆ ಕರೆದಾಗ ನೊಡೋಣ.

**ಶ್ರೀ ಬಿ. ರಮಾನಾಥ ರೈ:** ಈ ರಾಜ್ಯದಲ್ಲಿ ಅರಣ್ಯ ಹಕ್ಕುಗಳ ಕಾಯಿದೆಯಡಿಯಲ್ಲಿ ಎಲ್ಲೆಲ್ಲಿ ಅರ್ಜಿ ಹಾಕಿದ್ದಾರೆ, ನಾವು ಕ್ರಮ ಕೈಗೊಳ್ಳುತ್ತಿದ್ದೇವೆ.

**ಅಧ್ಯಕ್ಷರು:** ಅವರಿಗೆ ಅದು ಗೊತ್ತಿಲ್ಲ.

**ಶ್ರೀ ಬಿ. ರಮಾನಾಥ ರೈ:** 1978ರ ಹಿಂದೆ ಯಾರು ಅಲ್ಲಿದ್ದಾರೆ ಅವರಿಗೆ 3 ಎಕರೆ ಕೊಡಬಹುದು ಎಂದು ಸಹ ಹೇಳಿದ್ದೇವೆ. 1980ರ ಹಿಂದೆ ಮಂಜೂರಾತಿಯಾಗಿದ್ದರೆ ಅದಕ್ಕೂ ಸಹ ಏನೂ ಸಮಸ್ಯೆಯಾಗುವುದಿಲ್ಲ.

**ಅಧ್ಯಕ್ಷರು:** ಈಗ ನಾನು argumentಗೆ enter ಆಗಬೇಕಾಗುತ್ತದೆ. ಇದೇ ಸದನದಲ್ಲಿ ನೀವು 1978ರಿಂದ ಮಂಜೂರು ಮಾಡಿರುವುದು ಇಂತಿಷ್ಟು ಇವೆ ಎಂದು ಹೇಳಿದ್ದರಲ್ಲ, statement ಕೊಟ್ಟಿದ್ದೀರಾ? ಇವತ್ತಿಗೂ ಒಬ್ಬ ಯಾರಿಗಾದರೂ ಕೊಟ್ಟಿದ್ದೀರಾ? 1978ರ ಹಿಂದೆ ಎಂದರೆ Forest Conservation Act ಪ್ರಕಾರ ಅರ್ಜಿ ಕೊಟ್ಟವು 5,000, 6,000 ಇದೆ ಎಂದು ಸದನದಲ್ಲಿ ಹೇಳಿಕೆ ಕೊಟ್ಟಿದ್ದೀರಿ. ಇವತ್ತಿನವರೆಗೂ ಅವರಿಗೆ ಹಕ್ಕುಪತ್ರ ಕೊಟ್ಟಿದ್ದೀರಾ?

**ಶ್ರೀ ಬಿ. ರಮಾನಾಥ ರೈ:** ಅರಣ್ಯ ಹಕ್ಕು ಕಾಯಿದೆ ಪ್ರಕಾರ ಮತ್ತೆ ಅರ್ಜಿ ಹಾಕಲು ಅವಧಿ ವಿಸ್ತರಣೆ ಮಾಡಿದ್ದೇವೆ.

**ಅಧ್ಯಕ್ಷರು:** Forest Conservation Act ಪ್ರಕಾರ 1978–80ಕ್ಕಿಂತ ಹಿಂದೆ ಮಾಡಿದ್ದರೆ ಅವರಿಗೆ ಮೂರುವರೆ ಎಕರೆವರೆಗೂ ಕೊಡುವುದಕ್ಕೆ ಅವಕಾಶವಿದೆ. ಅಂಥ ಅರ್ಜಿಗಳೂ 5 ರಿಂದ 6,000 ಇದೆ ಎಂದು ನೀವು ಹೇಳಿಕೆ ಕೊಟ್ಟಿದ್ದೀರಿ. ಅವರಿಗೆ ಇವತ್ತಿನವರೆಗೂ ಕೊಟ್ಟಿದ್ದೀರಾ?

**ಶ್ರೀ ಬಿ. ರಮಾನಾಥ ರೈ:** ಅವರಿಗೇನೂ ಸಮಸ್ಯೆ ಮಾಡುತ್ತಿಲ್ಲ.

**ಅಧ್ಯಕ್ಷರು:** ಸಮಸ್ಯೆ ಮಾಡುವುದು ಬೇರೆ, ಅವರಿಗೆ ಹಕ್ಕುಪತ್ರ ಕೊಟ್ಟಿದ್ದೀರಾ?

**ಶ್ರೀ ಬಿ. ರಮಾನಾಥ ರೈ:** ಮಾನ್ಯ ಅಧ್ಯಕ್ಷರೆ, ತಮ್ಮ ಮಾಹಿತಿಗೆ 1978ರ ಪೂರ್ವದಲ್ಲಿ ಯಾರು ಅತಿಕ್ರಮಣ ಮಾಡಿ ಕೃಷಿ ಮಾಡಿದ್ದರೆ ಯಾರಾದರೂ ನಮ್ಮ ಅಧಿಕಾರಿಗಳು ಅದನ್ನು ತೆರವು ಮಾಡುವುದಕ್ಕೆ ಹೋದರೆ ಅವರ ಮೇಲೆ ಕ್ರಮವನ್ನು ಕೈಗೊಳ್ಳುತ್ತೇವೆ.

**ಶ್ರೀ ಗುರು ಪಾಟೀಲ್ ಶಿರವಾಳ:** ಮಾನ್ಯ ಸಭಾಧ್ಯಕ್ಷರೆ, ಸಮಿತಿಯನ್ನೇ ಮಾಡಲಿಲ್ಲ, ನಾವು ಯಾರಿಗೆ ಅರ್ಜಿ ಹಾಕಬೇಕು?

**ಅಧ್ಯಕ್ಷರು:** ನಾನು ಬೇರೆ ಮಾತಿನಲ್ಲಿ ಹೇಳುತ್ತಿದ್ದೆ, 6,000 ಜನರನ್ನು identify ಮಾಡಿದ್ದೇವೆಂದು ಸದನದಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಆದಷ್ಟು ಬೇಗ ಅವರಿಗೆಲ್ಲಾ ಹಕ್ಕುಪತ್ರ ಕೊಡುತ್ತೇವೆಂದು statement ಕೊಟ್ಟರು. ಈಗ 6–7 ತಿಂಗಳುಗಳಾಗಿದೆ, ಇವತ್ತಿನವರೆಗೂ ಹಕ್ಕುಪತ್ರ ಕೊಟ್ಟಿಲ್ಲ.

**ಶ್ರೀ ಬಿ. ರಮಾನಾಥ ರೈ:** ನಮ್ಮ ಸರ್ಕಾರ ಬಂದ ನಂತರ ನಾವು deemed forest ಬಗ್ಗೆ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಅರ್ಜಿಯನ್ನು process ಮಾಡಿ ಕ್ರಮ ಕೈಗೊಳ್ಳುತ್ತಿದ್ದೇವೆ. ತಮ್ಮ ನಿರ್ದೇಶನದ ಪ್ರಕಾರ ಅರಣ್ಯ ಹಕ್ಕುಗಳ ಕಾಯಿದೆ ಪ್ರಕಾರ ಸಮಗ್ರವಾಗಿ ಚರ್ಚೆ ಮಾಡಿ ಪರಿಹಾರ ಕ್ರಮ ಕೈಗೊಳ್ಳುತ್ತೇವೆ.

**ಅಧ್ಯಕ್ಷರು:** ಬೇಗ ಮಾಡಿ, ಅಲ್ಲಿ ದೇವಸ್ಥಾನಕ್ಕೆ ಹೋಗಿ ಬೀಳುವುದಕ್ಕಿಂತ ಈ ಕೆಲಸವನ್ನು ಮಾಡಿಕೊಡಿ ನಿಮಗೆ ಪುಣ್ಯ ಬರುತ್ತದೆ. ಶಿರವಾಳ್‌ರವರೆ, ನಾಳೆ ಬನ್ನಿ, ಏನು ಮಾಡಬೇಕೆಂದು ನಿಮಗೆ ಹೇಳಿಕೊಡುತ್ತೇನೆ.

**ಶ್ರೀ ಗುರು ಪಾಟೀಲ್ ಶಿರವಾಳ:** ಸಮಿತಿ ರಚನೆ ಮಾಡುವುದಕ್ಕೆ ಆದೇಶವನ್ನಾದರೂ ಮಾಡುವುದಕ್ಕೆ ಹೇಳಿ.

**ಅಧ್ಯಕ್ಷರು:** ವಿವರಗಳನ್ನು ತೆಗೆದುಕೊಂಡು ನೀವು ಬನ್ನಿ. ಏನು ಮಾಡಬೇಕೆಂದು ಹೇಳುತ್ತೇನೆ. ನಾಳೆ ಅವರನ್ನು ಕರೆಸಿ ತಕ್ಷಣ ಕಮಿಟಿ ಮಾಡಿಸಿಕೊಡುತ್ತೇನೆ.

**ಅಧ್ಯಕ್ಷರು:** ಶ್ರೀ ಪಿ. ರಾಜೀವ್ – ಸದನದಲ್ಲಿ ಹಾಜರಿಲ್ಲ.
ಶ್ರೀ ಮಲ್ಲಿಕಾರ್ಜುನ ಎಸ್. ಖೂಬಾ – ಸದನದಲ್ಲಿ ಹಾಜರಿಲ್ಲ.
ಶ್ರೀ ಅಶೋಕ್ ಖೇಣಿ– ಸದನದಲ್ಲಿ ಹಾಜರಿಲ್ಲ.
ಶ್ರೀ ಸಿ.ಎನ್.ಬಾಲಕೃಷ್ಣ– ಸದನದಲ್ಲಿ ಹಾಜರಿಲ್ಲ.
ಶ್ರೀ ಕೆ.ಎಂ.ತಿಮ್ಮರಾಯಪ್ಪ